:3641

:ಶ್ರೀ ನರೇಂದ್ರ ಬಾಬು ನೆ.ಲ. (ರಾಜಾಜಿನಗರ)

:ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1)	ಬೆಂಗಳೂರು ನಗರದಲ್ಲಿ ಎಷ್ಟು ಅಗ್ನಿಶಾಮಕ ಕೇಂದ್ರಗಳು ಇವೆ? ಈ ಕೇಂದ್ರಗಳಲ್ಲಿ ಅವಶ್ಯಕವಾದ ಹಾಗೂ ಸುಸಜ್ಜಿತವಾದ ವಾಹನಗಳ ಸಂಖ್ಯೆ ಎಷ್ಟು?	ಬೆಂಗಳೂರು ನಗರದಲ್ಲಿ 11 ಅಗ್ನಿಶಾಮಕ ಠಾಣೆಗಳು, 4 ರಕ್ಷಣ ಘಟಕಗಳು ಮತ್ತು 3 ವಿಶೇಷ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಹಾಲಿ ಈ ಎಲ್ಲಾ ಠಾಣೆಗಳಲ್ಲಿ ಅಗ್ನಿಶಮನ ಕ್ಕಾಗಿ ಸುಸಜ್ಜಿತವಾದ ಒಟ್ಟು 36 ವಾಹನಗಳು ಇವೆ.
2)	ಅಗ್ನಿಶಾಮಕ ದಳದವರು ಬೆಂಕಿ ನಂದಿಸುವ ಸಂದರ್ಭದಲ್ಲಿ ಯಾವ ಇಲಾಖೆಗೆ ಅಥವಾ ಖಾಸಗಿಯವರಿಂದ ನೀರನ್ನು ಪಡೆಯುತ್ತಾರೆ;	ಅಗ್ನಿಶಾಮಕ ಸೇವೆಯ ಅಗ್ನಿ ನಂದಕ ವಾಹನ ಗಳಿಗೆ ಅಳವಡಿಸಿರುವ ನೀರನ್ನು ವಾಹನದ ಟ್ಯಾಂಕಿಗೆ ತುಂಬಿಸಲು ಅಥವಾ ನೇರವಾಗಿ ಅಗ್ನಿ ಅನಾಹುತದ ಸ್ಥಳಕ್ಕೆ ರವಾನಿಸಬಹು ದಾಗಿರುವುದರಿಂದ ಅನಾಹುತ ಸಂಭವಿಸುವ ಸ್ಥಳದ ಹತ್ತಿರದಲ್ಲಿರುವ ಯಾವುದೇ ನೀರಿನ ಸಂಗ್ರಹಗಾರರಿಂದ ನೀರನ್ನು ಪಡೆಯಬಹುದು ಬಹಳಷ್ಟು ಸಲ ಬಿ. ಡಬ್ಲ್ಯೂ.ಎಸ್.ಎ. ಎಸ್. ಬಿ. ರವರ ಓವರ್‌ಹೆಡ್ ಟ್ಯಾಂಕ್‌ನ ಹತ್ತಿರ ಅಳವಡಿಸಿರುವ ಪಿಲ್ಲಿಂಗ್ ಪಾಯಿಂಟ್ ನಿಂದ ನೀರನ್ನು ಪಡೆಯಲಾಗುತ್ತಿದೆ. ಒಂದು ವೇಳೆ ಯಾವುದೇ ಕಾರ್ಖಾನೆ ಅಥವಾ ಖಾಸಗಿ ಸ್ಥಳಗಳಲ್ಲಿ ನೀರಿನ ವ್ಯವಸ್ಥೆ ಇದ್ದರೆ ಅದನ್ನು ಸಹ ಪಡೆದು ಉಪಯೋಗಿಸ ಲಾಗುವುದು.
3)	ಯಶವಂತಪುರದ ಕಿರ್ಲೋಸ್ಕರ್ ಕಾರ್ಖಾನೆಯ ಒಳಗಡೆ ಬೆಂಕಿ ಹತ್ತಿಕೊಂಡಾದ ಸರಿ	ಯಶವಂತಪುರದ ಕಿರ್ಲೋಸ್ಕರ್ ಕಾರ್ಖಾ ನೆಯ ಒಳಗಡೆ ಸಂಭವಿಸಿದ ಬೆಂಕಿ ಅನಾಹುತ ವನ್ನು ನಿರ್ವಹಿಸಲು ಒಟ್ಟು 8 ವಾಹನಗಳನ್ನು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
	ಯಾಗಿ ನೀರು ಪೂರೈಕೆ ಇಲ್ಲದೆ ಅಕ್ಕ- ಪಕ್ಕದಲ್ಲಿ ವಾಸವಾಗಿರುವ ಜನರ ಆಸ್ತಿ-ಪಾಸ್ತಿಗಳಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಿಯೋಜಿಸಲಾಗಿತ್ತು. ಪ್ರತಿಯೊಂದು ವಾಹನದಲ್ಲಿ ಕೊಂಡೊಯ್ದ 4500 ಲೀಟರ್ ನಷ್ಟು ಕನಿಷ್ಠ ನೀರನ್ನು ಬಳಸಿದ ನಂತರ ಸದರಿ ಆವರಣದಲ್ಲಿ ನೀರಿನ ವ್ಯವಸ್ಥೆ ಇಲ್ಲದ ಕಾರಣ ಮಲ್ಲೇಶ್ವರ ಹಾಗೂ ರಾಜಾಜಿನಗರದಲ್ಲಿರುವ ಬಿ.ಡಬ್ಲ್ಯೂ.ಎಸ್. ಎಸ್.ಬಿ. ಸಂಗ್ರಹಗಾರ ಮತ್ತು ಯಶವಂತ ಪುರಂ ಅಗ್ನಿಶಾಮಕ ಠಾಣೆಯ ಆವರಣದಲ್ಲಿರುವ ಸಂಗ್ರಹಗಾರದಿಂದ ನೀರನ್ನು ರವಾನಿಸಲಾಗಿದೆ. ಇದರಿಂದ ಅಗ್ನಿಶಮನ ಕಾರ್ಯದಲ್ಲಿ ಬಾಗಶಃ ಅಡಚಣೆಯಾಗಿದ್ದು ಇದರಿಂದ ಕಾರ್ಖಾನೆಯ ಆವರಣಕ್ಕೆ ಹೊಂದಿಕೊಂಡಂತೆ ನಿರ್ಮಿಸಿರುವ ಕೆಲವು ವಸತಿ ಗೃಹಗಳಿಗೆ ಭಾಗಶಃ ಜಖಂ ಆಗಿದೆ.
4)	4. ನೊಂದ ಜನರಿಗೆ ಈ ಕಂಪನಿಯವರು ಪರಿಹಾರದ ಮೊತ್ತವನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ನೆ. ಲ. ನರೇಂದ್ರಬಾಬು :- ನಾನು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದೀರಿ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸಬೇಕೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮುಖ್ಯಮಂತ್ರಿಗಳ ಪರವಾಗಿ): ಈಗಾಗಲೇ ಉತ್ತರವನ್ನು ಒದಗಿಸಿದ್ದೇನೆ.

ಅಧ್ಯಕ್ಷರು :- ಉತ್ತರ ಬಂದಿದೆಯಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಉತ್ತರವನ್ನು ಒದಗಿಸಿದ್ದೇನೆ. ಅದಲ್ಲದೆ, ವಿಶೇಷವಾಗಿ ಅವರು ಕೇಳಿದ್ದು, ಯಶವಂತಪುರದಲ್ಲಿ ಕಿರ್ಲೋಸ್ಕರ್ ಕಾರ್ಖಾನೆ ಒಳಗಡೆ

ಸಂಭವಿಸಿದ ಬೆಂಕಿ ಅನಾಹುತದಿಂದ ಪಕ್ಕದಲ್ಲಿರುವ ಮನೆಗಳಿಗೇನು ತೊಂದರೆಯಾಯಿತು. ಅಲ್ಲಿ ಏನು ಇವತ್ತು ಹಾನಿಯಾಗಿದೆ, ಆ ಹಾನಿಯನ್ನು ತುಂಬುವ ಕೆಲಸ ಆಗಿದೆಯೋ ? ಹೇಗೆ ? ಎನ್ನುವುದು ಅವರಿಗೆ ಸಂಶಯವಿತ್ತು. ಈಗಾಗಲೇ ಅಲ್ಲಿ ಸಂಬಂದಪಟ್ಟವರಿಗೆ ಆ ಕಿರ್ಲೋಸ್ಕರ ಕಂಪನಿ ವತಿಯಿಂದ ಅಂದರೆ, ಸಂಬಂಧಪಟ್ಟಂಥ ಜನರ ವತಿಯಿಂದ ಸುಮಾರು 15 ಸಾವಿರ ರೂಪಾಯಿ ಮತ್ತು 10 ಸಾವಿರ ರೂಪಾಯಿಗಳೇನು ಲುಕ್ಸಾನು ಆಗಿತ್ತು. ಬರ್ಪಾಯಿ ಮಾಡುವ ಕೆಲಸವನ್ನು ಕಾರ್ಖಾನೆಯವರು ಮಾಡಿದ್ದಾರೆ. ಆ ಆವರಣಕ್ಕೆ ಹೊಂದಿದಂತೆ ಕೆಲವು ವಸತಿ ಗೃಹಗಳಿಗೆ ಸಹ ಭಾಗಶಃ ಏನು ಜಖಂ ಆಗಿತ್ತು ಅದರ ಬಗ್ಗೆ ಕೂಡ ಗಮನ ಹರಿಸಿಕೊಂಡಿದ್ದಾರೆ. ಆದರೆ, ಇನ್ನೇನಾದರೂ ಮಾಡಬೇಕಾಗುವುದಿದ್ದರೆ, ಅದನ್ನು ಬರವಣಿಗೆಯಲ್ಲಿ ಕೊಟ್ಟರೆ, ಖಂಡಿತವಾಗಿಯೂ ನಮ್ಮ ಕಾರ್ಪೋರೇಷನ್ ಕಮಿಷನರ್‌ರವರಿಗೆ ಅಥವಾ ನಮ್ಮ ಅಗ್ನಿ ಶಾಮಕ ದಳದ ಮುಖ್ಯಸ್ಥರಿಗೆ ಹೇಳಿ ಇದರ ಬಗ್ಗೆ ಸಹಾಯ ಮಾಡುವ ಕೆಲಸವನ್ನು ಮಾಡುತ್ತೇನೆ.

ಶ್ರೀ ನೆ.ಲ. ನರೇಂದ್ರ ಬಾಬು :– ಅವತ್ತಿನ ದಿವಸ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದರಿಂದ, ಅದು ನನ್ನ ಗಮನಕ್ಕೆ ಬಂತು. ಸ್ಥಳಕ್ಕೆ ಹೋದಾಗ, ಒಂದು ರೀತಿಯಾಗಿ ಆಘಾತವಾಗುವ ರೀತಿಯಲ್ಲಿ ಅಗ್ನಿಶಾಮಕ ದಳದವರು ಆ ಜಾಗದಲ್ಲಿ ಬೆಂಕಿ ನಂದಿಸಲು ಹೋಗಲಿಕ್ಕೇ ಕಷ್ಟವಾಗುವ ಪ್ರಸಂಗ ಅಲ್ಲಿ ಕಂಡು ಬಂತು. ಕಾರಣ ಏನೆಂದರೆ, ಇಡೀ ಕಿರ್ಲೋಸ್ಕರ ಕಾರ್ಖಾನೆಯ ಇಂಡಸ್ಟ್ರಿಯಲ್ ವೇಸ್ಟ್ ಅನ್ನು ಸುಮಾರು ಸಾವಿರಾರು ಟನ್ ಇಂಡಸ್ಟ್ರಿಯಲ್ ವೇಸ್ಟ್ ಅನ್ನು ಕೆಮಿಕಲ್ ಮಿಕ್ಸ್‌ಚರ್ಸ್ ಅನ್ನು ಅಲ್ಲಿ ಹಾಕಿದ್ದಾರೆ. ಅವತ್ತು ಬೆಂಕಿ ಹತ್ತಿಕೊಂಡಿದ್ದನ್ನು ನಂದಿಸಲಿಕ್ಕೆ ಅಗ್ನಿಶಾಮಕ ದಳದವರು ಆ ಸ್ಥಳಕ್ಕೆ ಹೋಗುವುದೇ ಕಷ್ಟವಾಗಿತ್ತು. ಏಕೆಂದು ಹೇಳಿದರೆ, ಈ ಕಡೆ ಬದಿಯಲ್ಲಿ ಮಿಲ್ಕ್ ಕಾಲೋನಿ ಎಂದು ಹೇಳಿ ಮನೆಗಳ ಸಾಲಿದೆ. ಆ ಕಡೆ ಒಳಗಡೆ ಬರಲಿಕ್ಕೇ ಆಗುತ್ತಿಲ್ಲ. ಜೊತೆಯಲ್ಲಿ ಬೆಂಕಿ ನಂದಿಸಲು ವಾಟರ್ ಜೊತೆ ಫೋರಿ, ಮಿಕ್ಸ್ ಮಾಡಿಕೊಳ್ಳುತ್ತಾರೆ.

ಕೆಮಿಕಲ್ ಮಿಕ್ಸ್‌ಚರ್ ಮಾಡಿಕೊಳ್ಳುತ್ತಾರೆ. ಅದರ ಕೊರತೆ ಇದೆ ಎಂಬುದು ಕಂಡು ಬಂತು. ಕೆಮಿಕಲ್ ಮಿಕ್ಸ್‌ಚರ್ ಅನ್ನು ಅಥವಾ ಕೆಮಿಕಲ್ ಕಾಂಪೌಂಡ್ ಅನ್ನು ನಂದಿಸಬೇಕಾದರೆ ಆ ಫೋಮ್ ಅನ್ನು ಅಥವಾ ಆ ಸೋವ್ ವಾಟರ್ ಅನ್ನು ಅಥವಾ ಆ ಕೆಮಿಕಲ್ ಮಿಕ್ಸ್‌ಚರ್ ಮಿಕ್ಸ್ ಏಕೆ ಮಾಡಿಕೊಳ್ಳುತ್ತಾರೆಂದು ನಾನು ಕೇಳಿದಾಗ, ನಮ್ಮಲ್ಲಿ ಸ್ಟಾಕ್ ಇಲ್ಲವೆಂದು ಹೇಳಿದರು. ಸನ್ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುವುದೇನೆಂದರೆ, ದಯವಿಟ್ಟು ಈ ಕೊರತೆಯನ್ನು ನೀಗಿಸಿ.

ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಇದು ನನಗೆ ಕಂಡ ಹಾಗೆ 3ನೇ ಅನಾಹುತ – ಆಗುತ್ತಿರುವುದು. ಜೊತೆಯಲ್ಲಿ ನಾನು ಕೇಳುವುದೇನೆಂದರೆ, ಸೆಟ್ ಬ್ಯಾಂಕ್ ಏರಿಯಾಸ್‌ನಲ್ಲಿ ಅಥವಾ ಎಲ್ಲೇ ಯಾವ ರೀತಿಯಾದ ಅಪಾಯಕಾರಿಯಾದ ಸಾಮಗ್ರಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಕೆಎಂಸಿ ಆಕ್ಟ್ ಆಗಲಿ ಅಥವಾ ಸರ್ಕಾರದಲ್ಲಾಗಲಿ ಬಹಳ ಸ್ಪಷ್ಟವಾಗಿದೆ. ಆ ರೀತಿ ಕೆಮಿಕಲ್ಸ್ ಹಾಕಿಕೊಂಡು ಎಲ್ಲೆಂದರಲ್ಲಿ ರೆಸಿಡೆನ್ಷಿಯಲ್ ಏರಿಯಾ ಪಕ್ಕದಲ್ಲಿ ಸ್ಟೋರ್ ಮಾಡಬಾರದು. ಎರಡನೆಯದಾಗಿ, ಕಿರ್ಲೋಸ್ಕರ ಕಾರ್ಖಾನೆಯವರು ಅವತ್ತು ಏನು ಕೊಟ್ಟರೆಂದರೆ ಸಂಬಂಧಪಟ್ಟದ್ದನ್ನು ನಾವು ಬೇರೆಯವರಿಗೆ ಮಾರಿ ಬಿಟ್ಟಿದ್ದೇವೆ. ಅದಕ್ಕೂ, ಇದಕ್ಕೂ ನಮಗೆ ಸಂಬಂಧವಿಲ್ಲ ಅನ್ನುವ ರೀತಿಯಲ್ಲಿ ಕೈ ತೊಳೆದುಕೊಳ್ಳುತ್ತಾ ಇದ್ದರು. ಜೊತೆಯಲ್ಲಿ ನಮ್ಮ ರಾಜಾಜಿನಗರ ಕ್ಷೇತ್ರದ ಹತ್ತಿರದಲ್ಲಿ ಅವತ್ತು ನೀರು ತರಬೇಕಾದರೆ ಹರ ಸಾಹಸ ಆಯಿತು. ಕೇಳಿದರೆ ಅಲ್ಲಿ. ಬಿಡಬ್ಲ್ಯೂ ಎಸ್‌ಎಸ್‌ಬಿನಿಂದ ಸ್ಟಾಕ್ ಸಿಗುತ್ತಿಲ್ಲ. ಕೊನೆಗೆ ರಾತ್ರಿ 12.30, 1 ಗಂಟೆವರೆಗೂ ಬಹಳ ಸಾಹಸ ಮಾಡಿ ಖಾಸಗಿಯವರಿಂದ ತೆಗೆದುಕೊಳ್ಳುತ್ತಿದ್ದೆವು. ಈಗಾಗಲೇ ದಯವಿಟ್ಟು ಇಂಡಸ್ಟ್ರಿಯಲ್ ಏರಿಯಾ ಅಲ್ಲಿಗೆ ದಯವಿಟ್ಟು ಒಂದು ಬೋರ್‌ವೆಲ್ ಪ್ರೊವೈಡ್ ಮಾಡಿ ಎಂದು ನಾನು ಸರ್ಕಾರಕ್ಕೆ ಬರೆದು 6 ತಿಂಗಳಾಯಿತು. ಇದುವರೆಗೂ ಪ್ರೊವೈಡ್ ಮಾಡಲಿಲ್ಲ. ದಯವಿಟ್ಟು ತುರ್ತಾಗಿ, ನೀರಿನ ಸೌಲಭ್ಯ ಕೊಡಬೇಕು.

ಈಗಾಗಲೆ ಅಲ್ಲಿ ಆಗಿರತಕ್ಕಂಥ ಹಾನಿಯ ಬಗ್ಗೆ ಇದುವರೆವಿಗೂ ಒಬ್ಬರೂ ಹೋಗಿ ವಿಚಾರಣೆ ಮಾಡಿಲ್ಲ. ನಾನು ಆ ದಿನ ಕಾರ್ಪೋರೇಷನ್ ಕಮೀಷನರ್‌ರವರ ಮನೆಗೆ ಫೋನು ಮಾಡಿ ತಿಳಿಸಿದೆ. ಪೊಲೀಸ್ ಕಮೀಷನರ್‌ಗೂ ಹೇಳಿದೆ. ಅವರು ನಮ್ಮ ಅಧಿಕಾರಿಗಳು ಅಲ್ಲಿ ಇದ್ದಾರೆಂದು ಹೇಳಿದರು. ಇದುವರೆವಿಗೂ ಅಲ್ಲಿ ಏನೂ ಆಗಿಲ್ಲದೇ ಇರುವುದರಿಂದ ನನ್ನ ಕ್ಷೇತ್ರದ ಜನರು ನನ್ನನ್ನು ಕೇಳುತ್ತಿದ್ದಾರೆ ನಾನೇನು ಉತ್ತರ ಕೊಡಲಿ ನೀವೇ ಹೇಳಿ. ದಯವಿಟ್ಟು, ನಮ್ಮ ಇಂಡಸ್ಟ್ರಿಯಲ್ ಟೌನ್‌ನ ಅಗ್ನಿಶಾಮಕ ಕಚೇರಿಯ ವ್ಯಾಪ್ತಿಯಲ್ಲಿ ಒಂದು ಬೋರ್‌ವೆಲ್‌ಗೆ ಮಾರ್ಕ್ ಮಾಡಿ ಇಟ್ಟಿದ್ದಾರೆ. ಅದು ಆರು ತಿಂಗಳಾಯಿತು. ನಾನು ಸಹ ಇದರ ಬಗ್ಗೆ ಪತ್ರ ಬರೆದರೂ ಇನ್ನೂ ಬೋರ್‌ವೆಲ್ ತೋಡಿಲ್ಲ. ಇಂಥ ಅನಾಹುತಗಳು ತಪ್ಪಿಸಬೇಕಾದರೆ, ಇಂಥ ಅಪಾಯಕಾರಿಯ ಬಗ್ಗೆ ನಾನು ಹೇಳಿದ್ದರೂ ಸಹ, ಕಿರ್ಲೋಸ್ಕರ್ ಅವರಿಗಾಗಲಿ ಅಥವಾ ಅದನ್ನು ಕೊಂಡು ಕೊಂಡವರಿಗಾಗಲಿ ಯಾರಿಗಾದರೂ ನೋಟೀಸ್ ಕೊಟ್ಟಿದ್ದರೆ ದಯಮಾಡಿ ನನಗೆ ಆ ನೋಟೀಸ್‌ನ ಕಾಪಿ ಕೊಡಿ. ಇದುವರೆವಿಗೂ ಅಲ್ಲಿ ಯಆರಿಗೂ ನೋಟಿಸ್ ಕೊಟ್ಟಿದ್ದು ನನ್ನ ಗಮನಕ್ಕೆ ಬಂದಿಲ್ಲ. ಅಲ್ಲಿ ಪರಿಹಾರ ಕೊಟ್ಟಿದ್ದು ನನ್ನ ಗಮನಕ್ಕೆ ಬಂದಿಲ್ಲ. ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ. ಮುಂದೆ

: ಆಗುವ ಅನಾಹುತ ತಪ್ಪಿಸಬೇಕೆಂದರೆ ಮುಂಜಾಗ್ರತೆ ಕ್ರಮವನ್ನು ತಾವು ತೆಗೆದುಕೊಳ್ಳಿ. ಫೋಮ್ ಅಂಡ್ ಕೆಮಿಕಲ್ ಮಿಕ್ಚರ್ ಅಗ್ನಿ ಶಾಮಕ ಠಾಣೆಯಲ್ಲಿ ಸ್ಟಾಕ್ ಇಲ್ಲ ಅಂದರೆ ದಯವಿಟ್ಟು ಅದನ್ನು ತರಿಸಿ ಇಡಿ. ಇಂಥ ಅನಾಹುತಗಳಾದಾಗ ಅಂಥ ಬೆಂಕಿಯನ್ನು ಅರಿಸಲಿಕ್ಕೆ ಕೆಮಿಕಲ್ ಮಿಕ್ಚರ್ ಇಲ್ಲಾಂದ್ರೆ ಕಷ್ಟವಾಗುತ್ತದೆ. ಇದನ್ನು ಒದಗಿಸಿ ಎಂದು ನಾನು ತಮ್ಮ ಮುಖೇನ ಸರಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ನಿಜವಾಗಲೂ ಕೊರತೆ ಇದೆ ಎನ್ನುತಕ್ಕಂಥ ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ, ಮಾನ್ಯ ನರೇಂದ್ರ ಬಾಬುರವರು ಹೇಳಿದ ಮೇಲೆ, ಖಂಡಿತವಾಗಿ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೊರತೆಯನ್ನು ತುಂಬಿಸುವ ಕೆಲಸ ಮಾಡಬೇಕೆಂದು ಆದೇಶವನ್ನು ನಾನು ಕೊಡುತ್ತೇನೆ. ಇದರ ಜೊತೆಗೆ ಅದಕ್ಕೆ ಸಂಬಂಧಪಟ್ಟ ಕಾಂಪೌಂಡ್ ಪಕ್ಕದಲ್ಲಿನ ಮನೆಗಳಿಗೆ ಏನು ತೊಂದರೆಯಾಗಿದೆ ಹಾಗೂ ಅವರಿಗೇನು ಲುಕ್ಸಾನ್ ಆಗಿದೆ, ಅದರ ಬಗ್ಗೆ ಪರಿಹಾರವನ್ನು ಕೂಡ ಸಂಬಂಧಪಟ್ಟವರು ಕೊಡಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿ ಅದನ್ನು ಕೂಡ ಕೊಡಿಸ ತಕ್ಕಂಥ ವ್ಯವಸ್ಥೆ ಮಾಡುತ್ತೇನೆ. ಮೂರನೇಯದಾಗಿ ಅಲ್ಲಿ ಬೋರ್‌ವೆಲ್ ಹಾಕಿಸಬೇಕೆಂದು ಏನು ಹೇಳಿದ್ದಾರೆ. ಖಂಡಿತವಾಗಿ ಫೈರ್ ಫೋರ್ಸ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಅವರ ಅಗ್ನಿ ಶಾಮಕ ಠಾಣೆ ಎಲ್ಲಿದೆ ಅಲ್ಲಿ ಒಂದು ಬೋರ್‌ವೆಲ್ ಕೊರೆಸುವುದಕ್ಕೆ ಪ್ರಯತ್ನಿಸಲಾಗುವುದು, ನೀರು ಬಂದರೆ ಪರವಾಗಿಲ್ಲ, ನೀರು ಬಾರದೇ ಇದ್ದರೆ ಕಷ್ಟವಾಗುತ್ತದೆ. ಜೊತೆಗೆ ಆ ಹಣವೂ ವೇಷ್ಟ್ ಆಗುತ್ತದೆ, ಅದನ್ನು ಸಂಬಂಧಪಟ್ಟವರಿಗೆ ಹೇಳಿ ಆ ಬೋರ್‌ವೆಲ್ ತೆಗಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು..

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 29–3–05 ರ 19 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 156 ಪ್ರಶ್ನೆಗಳ ಪೈಕಿ 110 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಟಿ. ರಾಜಣ್ಣ, (ಕಾರ್ಯದರ್ಶಿ ವಿಧಾನ ಸಭೆ) : ಮಾನ್ಯ ಅಧ್ಯಕ್ಷರೆ, ವಿಧಾನ